1) ಪುತ್ತೂರು ನಗರದ ಎಡಿಬಿ ಯೋಜನೆ ಕಾರ್ಯಕ್ರಮಗಳು ಈಗ ಯಾವ ಹಂತದಲ್ಲಿದೆ?

2) ಪುತ್ತೂರು ನಗರಸಭೆಯ ಆಸ್ಪತ್ರೆಯಾವ ಹಂತದಲ್ಲಿದೆ?

3) ಈ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :-

1) ಈ ಯೋಜನೆಯಡಿ ತೆಗೆದುಕೊಳ್ಳಲಾಗುವ ಕಾಮಗಾರಿಗಳನ್ನು ಗುರುತಿಸಲಾಗಿರುತ್ತದೆ. ಈ ಬಗ್ಗೆ ಭಾರತ, ರಾಜ್ಯ ಸರ್ಕಾರ ಹಾಗೂ ಎ.ಡಿ.ಬಿ. ಯೊಡನೆ ಸಾಲದ ಒಡಂಬಡಿಕೆಯಾಗಿರುವುದಿಲ್ಲ. ಅಕ್ಟೋಬರ್ 1999ರಷ್ಟರಲ್ಲಿ ಸಾಲ ಒಡಂಬಡಿಕೆಯು ಸಹಿಯಾಗಿ ಯೋಜನೆ ಜಾರಿಗೆ ಬರುವ ಅಂದಾಜು ಮಾಡಲಾಗಿದೆ. ಆ ನಂತರ ಅನುಮೋದಿತ ಕಾರ್ಯಕ್ರಮದಂತೆ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

2) ಪುತ್ತೂರು ನಗರಸಭೆಯ ಆಸ್ಪತ್ರೆಯನ್ನು ಎ.ಡಿ.ಬಿ. ಯೋಜನೆಯಡಿ ತೆಗೆದುಕೊಳ್ಳುವ ಬಗ್ಗೆ ಪ್ರಸ್ತಾವನೆಯಾಗಿರುವುದಿಲ್ಲ.

3) ಅಕ್ಟೋಬರ್ 1999 ರಷ್ಟರಲ್ಲಿ ಸಾಲ ಒಡಂಬಡಿಕೆಯು ಜಾರಿಗೆಯಾಗಬಹುದೆಂದು ಅಂದಾಜು ಮಾಡಲಾಗಿದೆ. ಆನಂತರವಷ್ಟೆ, ಅನುಮೋದಿತ ಕಾರ್ಯಕ್ರಮದಂತೆ ಕಾಮಗಾರಿಗಳನ್ನು ಪ್ರಾರಂಭಿಸಲು ಸಾಧ್ಯವಾಗುವುದು.

ಮೈಸೂರು ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆ.

856(1260) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರದ ವಿವಿಧ ಇಲಾಖೆಗಳ ಮುಖೇನ 1998-99ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ಖರ್ಚು ಮಾಡಿರುವ ಹಣವೆಷ್ಟು ;

ಆ) ಮೈಸೂರು ಜಿಲ್ಲೆಯಲ್ಲಿ ಈ ಯೋಜನೆಯಡಿ ಖರ್ಚಾದ ಹಣ ಎಷ್ಟು ;

ಇ) 1997-98ನೇ ಸಾಲಿನ ಎನ್.ಸಿ.ಪಿ.ಗೆ ಸಂಬಂಧಿಸಿದಂತೆ ಮೈಸೂರು ಜಿಲ್ಲೆಯಿಂದ ಬಾಕಿ ಇರುವ ಉಪಯುಕ್ತ ದೃಢೀಕರಣಗಳೆಷ್ಟು ;

ಈ) ಉಪಯುಕ್ತ ದೃಢೀಕರಣ ನೀಡದಿರುವ ಅಧಿಕಾರಿಗಳ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :—

ಅ) ಸರ್ಕಾರದ ವಿವಿಧ ಇಲಾಖೆಗಳ ಮುಖಾಂತರ 1998-99ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ಜನವರಿ 99ನೇ ಮಾಹೆಯವರೆಗೆ ಖರ್ಚು ಮಾಡಿರುವ ಹಣದ ವಿವರ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

ರಾಜ್ಯ ಯೋಜನೆ	ವಿಶೇಷ ಕೇಂದ್ರೀಯ ನೆರವು	ಒಟ್ಟು
199.97	11.92	211.71

ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಸದರಿ ಯೋಜನೆಯಡಿ ಜನವರಿ 99ನೇ ಮಾಹೆಯವರೆಗೆ ಖರ್ಚು ಮಾಡಿರುವ ಹಣದ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ರಾಜ್ಯ ಯೋಜನೆ	ವಿಶೇಷ ಕೇಂದ್ರೀಯ ನೆರವು	ಒಟ್ಟು
81.57	38.40	119.97

ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ವಿಶೇಷ ಕೇಂದ್ರೀಯ ಸಹಾಯ ಧನ ರೂ. 24.30 ಲಕ್ಷಕ್ಕೆ ಹಣ ವಿನಿಯೋಗ ದೃಢೀಕರಣ ಪತ್ರ ಬಾಕಿ ಇರುತ್ತದೆ.

1997-98ನೇ ಸಾಲಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದವರು ಕಂತುಗಳಲ್ಲಿ ಬಿಡುಗಡೆ ಮಾಡಿದ ಹಣದ ಪೈಕಿ ರೂ. 24.30 ಲಕ್ಷವನ್ನು ಮೈಸೂರು ಜಿಲ್ಲಾ ಪಂಚಾಯತ್‌ಗೆ ದಿನಾಂಕ 16-3-98 ರಂದು ಬಿಡುಗಡೆ ಮಾಡಲಾಯಿತು. ಈ ಹಣವನ್ನು ಜಿಲ್ಲಾ ಪಂಚಾಯತ್ ನವರು ತಮ್ಮ ಲೆಕ್ಕಕ್ಕೆ ಜಮೆ ಮಾಡಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದ್ದಾರೆ. ಸದರಿ ಕಾರ್ಯಕ್ರಮಗಳನ್ನು ಪೂರ್ತಿ ಕಾರ್ಯಗತಮಾಡಿದ ಮೇಲೆ ಉಪಯುಕ್ತ ದೃಢೀಕರಣ ಪತ್ರವನ್ನು ಪಡೆಯಲಾಗುವುದು.

ಮೈಸೂರು ನಗರದ ವಾಣಿವಿಲಾಸ ನೀರು ಸರಬರಾಜು ಕಾರ್ಯಗಾರ ಕುರಿತು.

857(1282) ಶ್ರೀ ಹೆಚ್. ಎನ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಮೈಸೂರು ನಗರದ ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರದಲ್ಲಿ ಕೆಲಸ ಮಾಡುತ್ತಿರುವ ಹೆಚ್.ಆರ್. ನೌಕರರ ಸಂಖ್ಯೆ ಎಷ್ಟು?